ದಿನಾಂಕ 13–11–2017 ರಂದು ಮದ್ಯಾಹ್ನ 3.00 ಗಂಟೆಗೆ ಸಿಂಡಿಕೇಟ್ ಹಾಲ್, ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿಯಲ್ಲಿ ಜರುಗಿದ ರಾಯಚೂರು ಕೃಷಿ ವಿಶ್ವವಿದ್ಯಾಲಯದ ಮಾನ್ಯ ವ್ಯವಸ್ಥಾಪನಾ ಮಂಡಳಿಯ 33ನೇ ಸಭೆಯ ನಡುವಳಿಗಳು:

ಉಪಸ್ಥಿತರು:

| | | |
|---|---|---|
| 1. | ಡಾ. ಪಿ.ಎಂ. ಸಾಲಿಮಠ, ಮಾನ್ಯ ಕುಲಪತಿಗಳು, ಕೃವಿವಿ., ರಾಯಚೂರು | ಅಧ್ಯಕ್ಷರು |
| 2. | ಶ್ರೀ ಎಂ. ಮಹೇಶ್ವರ ರಾವ್, ಭಾಆಸೇ., ಸರಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಕರ್ನಾಟಕ ಸರಕಾರ | ಸದಸ್ಯರು |
| 3. | ಶ್ರೀ ಅಮರೇಶ ಬಲ್ಲಿದವ (ಸರಕಾರದಿಂದ ನಾಮನಿರ್ದೇಶಿತ) | ಸದಸ್ಯರು |
| 4. | ಶ್ರೀ ಸಿದ್ದಪ್ಪ ಭಂಡಾರಿ (ಸರಕಾರದಿಂದ ನಾಮನಿರ್ದೇಶಿತ) | ಸದಸ್ಯರು |
| 5. | ಶ್ರೀ ವೀರನಗೌಡ ಪರಸರೆಡ್ಡಿ (ಸರಕಾರದಿಂದ ನಾಮನಿರ್ದೇಶಿತ) | ಸದಸ್ಯರು |
| 6. | ಡಾ. ಎಂ. ಶೇಖರಗೌಡ, (ಮಾನ್ಯ ಕುಲಾಧಿಪತಿಯವರಿಂದ ನಾಮನಿರ್ದೇಶಿತ) | ಸದಸ್ಯರು |
| 7. | ಶ್ರೀಮತಿ ಹೇಮಾವತಿ ಲಂಕೇಶ, (ಮಾನ್ಯ ಕುಲಾಧಿಪತಿಯವರಿಂದ ನಾಮನಿರ್ದೇಶಿತ) | ಸದಸ್ಯರು |
| 8. | ಡಾ. ಎಂ.ಬಿ. ಚೆಟ್ಟಿ, ಅಸಿಸ್ಟಂಟ್ ಡೈರೆಕ್ಟರ್ ಜನರಲ್ (ಹೆಚ್.ಆರ್.ಡಿ.), ಐಸಿಎಆರ್ ನವದೆಹಲಿ (ಐಸಿಎಆರ್ ನಿಂದ ನಾಮನಿರ್ದೇಶಿತ) | ಸದಸ್ಯರು |
| 9. | ಶ್ರೀ ಗುತ್ತಿ ಜಂಬುನಾಥ, ಕುಲಸಚಿವರು, ಕೃವಿವಿ., ರಾಯಚೂರು | ಸದಸ್ಯ–ಕಾರ್ಯದರ್ಶಿ |

ಪ್ರಾರಂಭದಲ್ಲಿ, ರಾಯಚೂರು ಕೃಷಿ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳು ಹಾಗೂ ವ್ಯವಸ್ಥಾಪನಾ ಮಂಡಳಿಯ ಅಧ್ಯಕ್ಷರು ಸ್ವಾಗತ ಕೋರಿ, ಕೋರಂ ಇದ್ದ ಪ್ರಯುಕ್ತ, ಕುಲಸಚಿವರು ಹಾಗೂ ವ್ಯವಸ್ಥಾಪನಾ ಮಂಡಳಿಯ ಸದಸ್ಯ–ಕಾರ್ಯದರ್ಶಿಯವರಿಗೆ ಕಾರ್ಯಸೂಚಿ ಪ್ರಕಾರ ಸಭೆಯನ್ನು ಪ್ರಾರಂಭಿಸಲು ಸೂಚಿಸಿದರು.

ವ್ಯವಸ್ಥಾಪನಾ ಮಂಡಳಿಯ ನಾಮನಿರ್ದೇಶಿತ ಸದಸ್ಯರು ತಮಗೆ ಸಭೆಯ ಕಾರ್ಯಸೂಚಿ ಹಾಗೂ ಸಂಬಂಧಿತ ಪೂರಕ ಟಿಪ್ಪಣಿಯನ್ನು ಸಾಕಷ್ಟು ಮುಂಚಿತವಾಗಿ ಒದಗಿಸುತ್ತಿಲ್ಲವೆಂದೂ, ಸದರಿ ಮಾಹಿತಿಯನ್ನು ಸಭೆ ನಡೆಯುವ ದಿನಾಂಕದ ಕನಿಷ್ಟ ಏಳು ದಿನಗಳ ಮುಂಚಿತವಾಗಿ ಪೂರೈಸಬೇಕೆಂದು ಅಧ್ಯಕ್ಷರ ಗಮನಕ್ಕೆ ತಂದರು.

ಸಭೆಯಲ್ಲಿ ಹಾಜರಿದ್ದ ಕರ್ನಾಟಕ ಸರ್ಕಾರದ ಕೃಷಿ ಇಲಾಖೆಯ ಕಾರ್ಯದರ್ಶಿಗಳು ನಾಮನಿರ್ದೇಶಿತ ಸದಸ್ಯರ ಅಭಿಪ್ರಾಯಕ್ಕೆ ಸಹಮತಿಸಿದರು.

ಅಧ್ಯಕ್ಷರು ಇನ್ನು ಮುಂದೆ ವ್ಯವಸ್ಥಾಪನಾ ಮಂಡಳಿಯ ಸಭೆ ನಡೆಯುವ ದಿನಾಂಕದ ಕನಿಷ್ಟ ಏಳು ದಿನಗಳ ಮುಂಚಿತವಾಗಿಯೇ ಸಭೆಯ ಕಾರ್ಯಸೂಚಿ ಹಾಗೂ ಸಂಬಂಧಿತ ಪೂರಕ ಟಿಪ್ಪಣಿಯನ್ನು ಒದಗಿಸುವುದಾಗಿ ಭರವಸೆ ಇತ್ತರು.

(ಕ್ರಮ: ಕುಲಸಚಿವರು)

ತದನಂತರ, ಸಭೆಯಲ್ಲಿ ಈ ಕೆಳಗಿನಂತೆ ಕಾರ್ಯಸೂಚಿ ಮೇರೆಗೆ ವಿಷಯಗಳನ್ನು ಚರ್ಚಿಸಿ, ಠರಾಯಿಸಲಾಯಿತು:

| | |
|---|---|
| ಐಟಂ–1 | ಮಾನ್ಯ ವ್ಯವಸ್ಥಾಪನಾ ಮಂಡಳಿಯ 32ನೇ ಸಭೆಯ ನಡುವಳಿಗಳನ್ನು ಸ್ಥಿರೀಕರಿಸುವುದು.<br><br>ಠರಾವು:<br>ದಿನಾಂಕ 29–8–2017 ರಂದು ಜರುಗಿದ ರಾಯಚೂರು ಕೃವಿವಿ.,ಯ ಮಾನ್ಯ ವ್ಯವಸ್ಥಾಪನಾ ಮಂಡಳಿಯ 32ನೇ ಸಭೆಯ ನಡುವಳಿಗಳನ್ನು ಸ್ಥಿರೀಕರಿಸಲಾಯಿತು. |
| ಐಟಂ–2 | ಮಾನ್ಯ ವ್ಯವಸ್ಥಾಪನಾ ಮಂಡಳಿಯ 32ನೇ ಸಭೆಯ ನಡುವಳಿಗಳ ಮೇಲೆ ಕೈಗೊಂಡ ಅನುಪಾಲನಾ ಕ್ರಮಗಳಿಗೆ ಅನುಮೋದನೆ ನೀಡುವುದು. |

ಐಟಂ ಸಂಖ್ಯೆ : 4 ಆಯ್ಕೆ ಸಮಿತಿಯು ಶಿಫಾರಸಿದ ನೇಮಕಾತಿಗಳನ್ನು ಅನುಮೋದಿಸಿ, ಆಯ್ಕೆಗೊಂಡ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶಗಳನ್ನು ನೀಡುವಂತೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮತಿಸಿತು.

ಠರಾವು : ಕರ್ತವ್ಯಕ್ಕೆ ಹಾಜರಾಗಲು ನಿಗದಿಪಡಿಸಿದ ಗಡುವಿನೊಳಗಾಗಿ (3–10–2017) ಹಾಜರಾಗದ ಹಾಗೂ ಸದರಿ ಗಡುವಿನ ವಿಸ್ತರಣೆಯನ್ನೂ ಕೋರದಿರುವ ನೇಮಕಾತಿ ಆದೇಶಗಳನ್ನು ಪಡೆದ ಅಭ್ಯರ್ಥಿಗಳ ವಿವರಗಳನ್ನು ಸಭೆಯ ಮುಂದೆ ಮಂಡಿಸಿದ ಅಧ್ಯಕ್ಷರು, ಸದರಿ ಅಭ್ಯರ್ಥಿಗಳು ಕರ್ತವ್ಯಕ್ಕೆ ಹಾಜರಾಗದ ನಿಮಿತ್ತ, ಅವರ ನಂತರ, ನಿರೀಕ್ಷಣಾ ಪಟ್ಟಿಯಲ್ಲಿರುವ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶಗಳನ್ನು ನೀಡುವ ಬಗ್ಗೆ ಪ್ರಸ್ತಾಪಿಸಿ, ಮಂಡಳಿಯ ಅನುಮೋದನೆಯನ್ನು ಈ ಕೆಳಗಿನಂತೆ ಕೋರಿದರು:

| | |
|---|---|
| 2. | ಸಹಾಯಕ ಪ್ರಾಧ್ಯಾಪಕರು (ಕೃಷಿ ಕೀಟಶಾಸ್ತ್ರ) : ಸಾಅ–2 (ಗ್ರಾ–1/ಅಂ–1), ಪಪಂ–1<br><br>ಸದರಿ ಹುದ್ದೆಯ ಸಾಮಾನ್ಯ ಅಭ್ಯರ್ಥಿ (ಗ್ರಾಮೀಣ) ಮೀಸಲಾತಿಯಡಿ ಶ್ರೀ ಬಸವರಾಜ್ ಇವರು ತಾವು ಮೇಲುಸ್ತರದಲ್ಲಿ ಬರುವುದಿಲ್ಲವೆಂಬ ಬಗ್ಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಇವರನ್ನು ಸದರಿ ಹುದ್ದೆಗೆ ನೇಮಿಸುವ ಬಗ್ಗೆ ಮಂಡಳಿಯ ಅನುಮೋದನೆ ಕೋರಿದರು.<br><br>ಮಾನ್ಯ ಸದಸ್ಯರಾದ ಶ್ರೀ ಅಮರೇಶ ಬಲ್ಲಿದವ ಇವರು ಶ್ರೀ ಬಸವರಾಜ್ ರವರು ಮೇಲುಸ್ತರದಲ್ಲಿ ಬರುವುದಿಲ್ಲವೆಂಬ ಬಗ್ಗೆ ನಮೂನೆ–1ರಲ್ಲಿ ಪ್ರಮಾಣ ಪತ್ರವನ್ನು ಸಲ್ಲಿಸಿರುವರೇ ಎಂದು ಪ್ರಶ್ನಿಸುತ್ತಾ, ಶ್ರೀ ಬಸವರಾಜ್‌ರವರು ಸಂದರ್ಶನದ ಸಮಯದಲ್ಲಿ ಕೇಂದ್ರ ಸರ್ಕಾರದ ಇಲಾಖೆಯಲ್ಲಿ ಹುದ್ದೆಯನ್ನು ಹೊಂದಿರುವ ಕಾರಣ, ಅವರು ಮೇಲುಸ್ತರದಲ್ಲಿ ಬರುವುದಿಲ್ಲವೆಂಬ ಪ್ರಮಾಣ ಪತ್ರವನ್ನು ಸಲ್ಲಿಸಲು ಬರುವುದಿಲ್ಲವೆಂದು ಅಭಿಪ್ರಾಯಿಸಿದರು.<br><br>ಅಧ್ಯಕ್ಷರು, ತಾವು ಸಹಾಯಕ ಪ್ರಾಧ್ಯಾಪಕರ ಹುದ್ದೆಯ ಆಯ್ಕೆ ಸಮಿತಿಯ ಅಧ್ಯಕ್ಷರೂ ಆಗಿದ್ದು, ತಮಗೆ ಶ್ರೀ ಬಸವರಾಜ್ ರವರು ಸಲ್ಲಿಸಿರುವ 3ಬಿ ಜಾತಿ ಪ್ರಮಾಣ ಪತ್ರದಲ್ಲಿ ಅವರು ಮೇಲುಸ್ತರದಲ್ಲಿ ಬರುವುದಿಲ್ಲವೆಂಬುವುದರ ಬಗ್ಗೆ ಸ್ಪಷ್ಟ ಉಲ್ಲೇಖವಿದೆ ಎಂದು ಉತ್ತರಿಸಿದರು.<br><br>ಕೃಷಿ ಇಲಾಖೆಯ ಕಾರ್ಯದರ್ಶಿಗಳು ಶ್ರೀ ಅಮರೇಶ್ ಬಲ್ಲಿದವ ಇವರು ಮಂಡಿಸಿದ ಅಭಿಪ್ರಾಯದ ಹಿನ್ನೆಲೆಯಲ್ಲಿ ಶ್ರೀ ಬಸವರಾಜ್‌ರವರ ಅರ್ಹತೆಯನ್ನು ಪುನರ್ ಪರಿಶೀಲಿಸುವ ಅಗತ್ಯತೆ ಇದೆ ಎಂದು ಸಭೆಯ ಗಮನಕ್ಕೆ ತಂದರು.<br><br>ಮಂಡಳಿಯು ಶ್ರೀ ಅಮರೇಶ್ ಬಲ್ಲಿದವ ಇವರು ಅಧ್ಯಕ್ಷರಿಗೆ ಲಿಖಿತವಾಗಿ ತಮ್ಮ ಅಭಿಪ್ರಾಯವನ್ನು ಪೂರಕ ದಾಖಲಾತಿಗಳೊಂದಿಗೆ ಮಂಡಿಸುವಂತೆ ಮತ್ತು ಸದರಿ ಅಭಿಪ್ರಾಯದ ಹಿನ್ನೆಲೆಯಲ್ಲಿ ಆಯ್ಕೆ ಸಮಿತಿಯ ಅಧ್ಯಕ್ಷರು ಶ್ರೀ ಬಸವರಾಜ್‌ರವರ ಅರ್ಹತೆಯನ್ನು ಪುನರ್ ಪರಿಶೀಲಿಸಿ, ತಮ್ಮ ಅಭಿಪ್ರಾಯಗಳನ್ನು ಮಂಡಳಿಯ ಮುಂದಿನ ಸಭೆಯಲ್ಲಿ ಮಂಡಿಸುವಂತೆ ಠರಾಯಿಸಿತು. **(ಕ್ರಮ : ಶ್ರೀ ಅಮರೇಶ ಬಲ್ಲಿದವ ಮತ್ತು ಆಯ್ಕೆ ಸಮಿತಿಯ ಅಧ್ಯಕ್ಷರು)**<br><br>ಸಹಾಯಕ ಪ್ರಾಧ್ಯಾಪಕರು (ಕೃಷಿ ಕೀಟಶಾಸ್ತ್ರ) ಈ ಹುದ್ದೆಗೆ ಸಾಮಾನ್ಯ ಅಭ್ಯರ್ಥಿ (ಅಂಗವಿಕಲ) ಕೋಟಾದಡಿ ಯಾವುದೇ ಅಭ್ಯರ್ಥಿ ಇರದ ಕಾರಣ, ಅದನ್ನು ಸಾಮಾನ್ಯ ಪ್ರವರ್ಗಕ್ಕೆ ಪರಿವರ್ತಿಸಲಾಗಿದೆ ಎಂದು, ಸಾಮಾನ್ಯ ಪ್ರವರ್ಗದಲ್ಲಿ ಮೊದಲನೇ ಸ್ಥಾನದಲ್ಲಿದ್ದ ಡಾ॥ ಶೋಭಾರಾಣಿಯವರಿಗೆ ನೇಮಕಾತಿ ಆದೇಶವನ್ನು ನೀಡಲಾಗಿದ್ದು, ಅವರು ಕರ್ತವ್ಯಕ್ಕೆ ಹಾಜರಾಗಲು ಅವರಿಗೆ ನೀಡಲಾಗಿದ್ದ ಗಡುವಿನ ನಂತರವೂ ಕರ್ತವ್ಯಕ್ಕೆ ಹಾಜರಾಗದ ಕಾರಣ, ಅವರ ನಂತರ ನಿರೀಕ್ಷಣಾ ಪಟ್ಟಿಯಲ್ಲಿ ಶ್ರೀ ಹೆಚ್. ಗುರುಪ್ರಸಾದ್ ಹಾಗೂ ಶ್ರೀಮತಿ ಜಮುನಾ ಎಂಬ ಅಭ್ಯರ್ಥಿಗಳು ಇರುವುದಾಗಿ ತಿಳಿಸಿದರು. ಮುಂದುವರೆದು, ಸಾಮಾನ್ಯ (ಗ್ರಾಮೀಣ) ಹಾಗೂ ಸಾಮಾನ್ಯ ಪ್ರವರ್ಗಗಳ ಮೀಸಲಾತಿಯಡಿ ಆಯ್ಕೆ ಸಮಿತಿಯ ಶಿಫಾರಸ್ಸಿನಂತೆ ಶ್ರೀ ಹೆಚ್. ಗುರುಪ್ರಸಾದ್ ಇವರು ಈ ಎರಡೂ ಪ್ರವರ್ಗಗಳಲ್ಲಿ 2ನೇ ಸ್ಥಾನದಲ್ಲಿ ಇರುವುದಾಗಿಯೂ, ಶ್ರೀ ಬಸವರಾಜ್ ಇವರು ಸಾಮಾನ್ಯ ಪ್ರವರ್ಗದಲ್ಲಿ ಡಾ॥ ಶೋಭಾರಾಣಿಯವರ ನಂತರ ಅತೀ ಹೆಚ್ಚು |

ಅಂಕಗಳನ್ನು ತಾವು ಗಳಿಸಿದ್ದು, ಡಾ॥ ಶೋಭಾರಾಣಿಯವರು ಕರ್ತವ್ಯಕ್ಕೆ ಹಾಜರಾಗದ ನಿಮಿತ್ತ ಅವರ ನಂತರ ಅತೀ ಹೆಚ್ಚು ಅಂಕಗಳನ್ನು ಗಳಿಸಿದ ತಮ್ಮನ್ನು ಸಾಮಾನ್ಯ ಪ್ರವರ್ಗದಡಿ ಮೊದಲನೇ ಸ್ಥಾನವನ್ನು ನೀಡುವಂತೆ ಮನವಿಯನ್ನು ತಮಗೆ ಸಲ್ಲಿಸಿರುವರೆಂದು ಅಧ್ಯಕ್ಷರು ಸಭೆಯ ಗಮನಕ್ಕೆ ತಂದರು.

ಸಾಮಾನ್ಯ (ಗ್ರಾಮೀಣ) ಮೀಸಲಾತಿಯಡಿ ಶ್ರೀ ಬಸವರಾಜ್‌ರವರ ಅರ್ಹತೆಯ ಪ್ರಶ್ನೆ ಉದ್ಭವವಾಗಿದ್ದು, ಸದರಿ ಅಂಶವು ಇತ್ಯರ್ಥವಾಗುವವರೆಗೂ ಅವರನ್ನು ಸಾಮಾನ್ಯ ಪ್ರವರ್ಗದಡಿ ಸದರಿ ಹುದ್ದೆಗೆ ನೇಮಕಾತಿ ಮಾಡುವ ಪ್ರಸ್ತಾಪವನ್ನು ಮಂಡಳಿಯು ಮುಂದೂಡಿತು.

5. **ಸಹಾಯಕ ಪ್ರಾಧ್ಯಾಪಕರು (ಸಸ್ಯ ತಳಿ ಅಭಿವೃದ್ಧಿ ಶಾಸ್ತ್ರ) : ಸಾಅ-3 (ಮ-1ಗ್ರಾ-1/ಅಂ-1), ಪಪಂ-2 (ಮ-1), ಪಪಂ-1, ವರ್ಗ.1-1**

ಅಧ್ಯಕ್ಷರು ಸದರಿ ಹುದ್ದೆಗೆ ಪರಿಶಿಷ್ಟ ಜಾತಿ (ಸಾಮಾನ್ಯ) ಪ್ರವರ್ಗದಡಿ ಶ್ರೀ ರಾಜ್‌ಕುಮಾರ್ ರವರಿಗೆ ನೇಮಕಾತಿ ಆದೇಶವನ್ನು ನೀಡಲಾಗಿದ್ದು, ಆದರೆ ಅವರು ನಿಗದಿಪಡಿಸಿದ ಗಡುವಿನೊಳಗಾಗಿ ಕರ್ತವ್ಯಕ್ಕೆ ಹಾಜರಾಗದ ನಿಮಿತ್ತ ಮತ್ತು ಸದರಿ ಪ್ರವರ್ಗದಡಿ ಯಾವುದೇ ಅರ್ಹ ಅಭ್ಯರ್ಥಿಯು ಲಭ್ಯವಿಲ್ಲದ ಕಾರಣ, ಸದರಿ ಹುದ್ದೆಯು ಖಾಲಿ ಉಳಿಯುವುದಾಗಿ ಸಭೆಯ ಗಮನಕ್ಕೆ ತಂದರು.

ಮಂಡಳಿಯು ಸಹಾಯಕ ಪ್ರಾಧ್ಯಾಪಕ (ಸಸ್ಯ ತಳಿ ಅಭಿವೃದ್ಧಿ ಶಾಸ್ತ್ರ) ಹುದ್ದೆಯನ್ನು ರೋಸ್ಟರ್ ಹಾಗೂ ಮೀಸಲಾತಿ ನಿಯಮಗಳನುಸಾರವಾಗಿ ಪುನರ್ ಅಧಿಸೂಚಿಸಲು ಠರಾಯಿಸಿತು.

(ಕ್ರಮ: ಕುಲಸಚಿವರು)

10. **ಸಹಾಯಕ ಪ್ರಾಧ್ಯಾಪಕರು (ಪಶು ವಿಜ್ಞಾನ / ಪಶು ಸಂಗೋಪನೆ / ಕುಕ್ಕುಟ ವಿಜ್ಞಾನ) : ಸಾಅ-1 (ಮ-1), ಪ.ಜಾ.-1, ಪ.ಪಂ.-1, ವರ್ಗ1-1**

ಅಧ್ಯಕ್ಷರು ಸಾಮಾನ್ಯ (ಮಹಿಳೆ) ಪ್ರವರ್ಗದಡಿ ಸದರಿ ಹುದ್ದೆಗೆ ಡಾ॥ ಅನ್ನಪೂರ್ಣ ಅವಟಿ ಇವರಿಗೆ ನೇಮಕಾತಿ ಆದೇಶ ನೀಡಿದ್ದು, ಆದರೆ ನಿಗದಿತ ಅವಧಿಯೊಳಗಾಗಿ ಅವರು ಕರ್ತವ್ಯಕ್ಕೆ ಹಾಜರಾಗದ ಕಾರಣ ಮತ್ತು ಹಾಜರಾಗಲು ಸಮಯವನ್ನು ಕೋರಿರದ ಕಾರಣ, ಅವರ ನಂತರ ನಿರೀಕ್ಷಣಾ ಪಟ್ಟಿಯಲ್ಲಿರುವ ಡಾ॥ ಅಕ್ಷತಾ ಎಸ್. ಅಂಗಡಿ ಇವರಿಗೆ ನೇಮಕಾತಿ ಆದೇಶವನ್ನು ನೀಡುವ ಬಗ್ಗೆ ಮಂಡಳಿಯ ಅನುಮೋದನೆ ಕೋರಿದರು.

ಮಂಡಳಿಯು ಸಹಾಯಕ ಪ್ರಾಧ್ಯಾಪಕ (ಪಶು ವಿಜ್ಞಾನ / ಪಶು ಸಂಗೋಪನೆ) ಹುದ್ದೆಯ ಸಾಮಾನ್ಯ (ಮಹಿಳೆ) ಪ್ರವರ್ಗದಡಿ ಡಾ॥ ಅಕ್ಷತಾ ಎಸ್. ಅಂಗಡಿ ಇವರಿಗೆ ನೇಮಕಾತಿ ಆದೇಶ ನೀಡಲು ಅನುಮೋದಿಸಿತು.

(ಕ್ರಮ: ಕುಲಸಚಿವರು)

15. **ಸಹಾಯಕ ಪ್ರಾಧ್ಯಾಪಕರು (ಕೃಷಿ ತಾಂತ್ರಿಕತೆ) (ಎಫ್.ಎಂ.ಪಿ-2/ಎಸ್.ಡಬ್ಲ್ಯೂ.ಇ-2/ಪಿ.ಎಫ್.ಇ-1) : ಸಾ-2 (ಮ-1 / ಗ್ರಾ-1), ಪ.ಪಂ.-1, ವರ್ಗ1-1, 2ಎ-1**

ಅಧ್ಯಕ್ಷರು ಸದರಿ ಹುದ್ದೆಯ ಸಾಮಾನ್ಯ (ಮಹಿಳಾ) ಪ್ರವರ್ಗದಡಿ ನೇಮಕಾತಿ ಆದೇಶ ಪಡೆದ ಶ್ರೀಮತಿ ಸುಧಾದೇವಿ ಇವರಿಗೆ ಸಹಾಯಕ ಪ್ರಾಧ್ಯಾಪಕರು (ಸಂಸ್ಕರಣಾ ಮತ್ತು ಆಹಾರ ತಾಂತ್ರಿಕತೆ) ಹುದ್ದೆಗೆ ನೇಮಕಾತಿ ಆದೇಶ ನೀಡಿದ್ದು, ಈ ಹುದ್ದೆಗೆ ಶ್ರೀಮತಿ ಸುಧಾದೇವಿರವರು ಹಾಜರಾಗಿರುವ ನಿಮಿತ್ತ, ಅವರ ನಂತರ ನಿರೀಕ್ಷಣಾ ಪಟ್ಟಿಯಲ್ಲಿರುವ ಡಾ॥ ಟಿ.ವೀಣಾ ಇವರಿಗೆ ನೇಮಕಾತಿ ಆದೇಶವನ್ನು ನೀಡಲು ಮಂಡಳಿಯ ಮುಂದೆ ಮಂಡಿಸಿದರು.

ಮಂಡಳಿಯು ಸಹಾಯಕ ಪ್ರಾಧ್ಯಾಪಕ (ಕೃಷಿ ತಾಂತ್ರಿಕತೆ) (ಸಂಸ್ಕರಣಾ ಮತ್ತು ಆಹಾರ ತಾಂತ್ರಿಕತೆ) ಹುದ್ದೆಯ ಸಾಮಾನ್ಯ (ಮಹಿಳೆ) ಪ್ರವರ್ಗದಡಿ ಶ್ರೀಮತಿ ಸುಧಾದೇವಿಯವರ ನಂತರ ನಿರೀಕ್ಷಣಾ ಪಟ್ಟಿಯಲ್ಲಿರುವ ಡಾ॥ ಟಿ.ವೀಣಾ ಇವರಿಗೆ ನೇಮಕಾತಿ ಆದೇಶ ನೀಡುವಂತೆ ಠರಾಯಿಸಿತು.

(ಕ್ರಮ: ಕುಲಸಚಿವರು)

| | | |
|---|---|---|
| | | ಅಧ್ಯಕ್ಷರು ಆಯ್ಕೆ ಸಮಿತಿಯ ಸದಸ್ಯರ ನಜರುಚೂಕಿನಿಂದಾಗಿ ಸಹಾಯಕ ಪ್ರಾಧ್ಯಾಪಕ (ಕೃಷಿ ತಾಂತ್ರಿಕತೆ) (ಮಣ್ಣು ಮತ್ತು ನೀರು ತಾಂತ್ರಿಕತೆ) ಹುದ್ದೆಯ ಸಾಮಾನ್ಯ (ಗ್ರಾಮೀಣ) ಪ್ರವರ್ಗದಡಿ ಪಿ.ಹೆಚ್.ಡಿ ಪದವಿ ಹೊಂದಿದ ಡಾ॥ ಮಲ್ಲಿಕಾರ್ಜುನ ರೆಡ್ಡಿ ಇವರಿಗೆ ಸದರಿ ಪದವಿಯ ಕುರಿತು ನೀಡಬೇಕಾಗಿದ್ದ 10 ಅಂಕಗಳನ್ನು ನೀಡದೇ ಹೋದುದರಿಂದ, ಸದರಿ ಹುದ್ದೆಗೆ ಶ್ರೀ ಮಧುಸೂದನ್ ಎಂ.ಎಸ್., ಇವರಿಗೆ ತಪ್ಪಾಗಿ ನೇಮಕಾತಿ ಆದೇಶವನ್ನು ನೀಡಿದ್ದು, ತದನಂತರ ಸದರಿ ದೋಷಯುಕ್ತ ನೇಮಕಾತಿ ಆದೇಶವನ್ನು ಕೂಡಲೇ ಹಿಂಪಡೆದು, ಶ್ರೀ ಮಧುಸೂದನ್, ಎಂ.ಎಸ್., ರವರು ಹುದ್ದೆಗೆ ಹಾಜರಾಗದಂತೆ ಕ್ರಮವಹಿಸಿರುವುದಾಗಿಯೂ, ಆಯ್ಕೆ ಸಮಿತಿಯು ಮತ್ತೊಮ್ಮೆ ಡಾ॥ ಮಲ್ಲಿಕಾರ್ಜುನ ರೆಡ್ಡಿಯವರ ದಾಖಲಾತಿಗಳನ್ನು ಪರಿಶೀಲಿಸಿದಾಗ, ಅವರು ಪಿ.ಹೆಚ್.ಡಿ. ಪದವೀಧರರಾಗಿದ್ದು, ಆ ಸಂಬಂಧ ನೀಡಬೇಕಾದ 10 ಅಂಕಗಳನ್ನು ನೀಡದಿರುವ ಬಗ್ಗೆ ಖಚಿತಪಡಿಸಿಕೊಂಡು 10 ಅಂಕಗಳನ್ನು ಡಾ॥ ಮಲ್ಲಿಕಾರ್ಜುನ ರೆಡ್ಡಿಯವರಿಗೆ ನೀಡಿದಾಗ, ಅವರು ಈ ಹುದ್ದೆಯ ಸಾಮಾನ್ಯ (ಗ್ರಾಮೀಣ) ಮೀಸಲಾತಿಯಡಿ ಅತೀ ಹೆಚ್ಚು ಅಂಕಗಳನ್ನು ಗಳಿಸಿ, ಪ್ರಥಮ ಸ್ಥಾನದಲ್ಲಿದ್ದಾರೆಂದು ಸಭೆಯ ಗಮನಕ್ಕೆ ತರುತ್ತಾ, ಇವರಿಗೆ ಸಹಾಯಕ ಪ್ರಾಧ್ಯಾಪಕರು (ಮಣ್ಣು ಮತ್ತು ನೀರು ತಾಂತ್ರಿಕತೆ) ಹುದ್ದೆಯ ಗ್ರಾಮೀಣ ಮೀಸಲಾತಿಯಡಿ ನೇಮಕಾತಿ ಆದೇಶವನ್ನು ನೀಡುವ ಬಗ್ಗೆ ಮಂಡಳಿಯ ಅನುಮೋದನೆಯನ್ನು ಕೋರಿದರು.<br><br>ಮಂಡಳಿಯು ಈ ಹುದ್ದೆಯನ್ನು ಭರ್ತಿಮಾಡುವಲ್ಲಿ ಶ್ರೀ ಮಧುಸೂದನ, ಎಂ.ಎಸ್. ಇವರಿಗೆ ಅಜಾಗರೂಕತೆಯಿಂದಾಗಿ ನೇಮಕಾತಿ ಆದೇಶ ನೀಡಲಾಗಿರುವುದನ್ನು ಖಚಿತಪಡಿಸಿಕೊಂಡು, ಸದರಿ ಹುದ್ದೆಗೆ ಸಾಮಾನ್ಯ (ಗ್ರಾಮೀಣ) ಕೋಟಾದಡಿ ಡಾ॥ ಮಲ್ಲಿಕಾರ್ಜುನ ರೆಡ್ಡಿಯವರಿಗೆ ಸಹಾಯಕ ಪ್ರಾಧ್ಯಾಪಕರು (ಮಣ್ಣು ಮತ್ತು ನೀರು ತಾಂತ್ರಿಕತೆ) ಹುದ್ದೆಗೆ ನೇಮಕಾತಿ ಆದೇಶವನ್ನು ನೀಡಲು ಅನುಮೋದಿಸಿತು.<br>(ಕ್ರಮ: ಕುಲಸಚಿವರು)<br><br>ಮಂಡಳಿಯು ಶ್ರೀ ಮಧುಸೂದನ, ಎಂ.ಎಸ್. ರವರಿಗೆ ನೀಡಲಾದ ದೋಷಪೂರಿತ ನೇಮಕಾತಿ ಆದೇಶವನ್ನು ತಡೆಹಿಡಿಯುವಂತೆ ಕುಲಸಚಿವರಿಗೆ ಸೂಚಿಸಿದ ಕುಲಪತಿಯವರ ಕ್ರಮವನ್ನು ಹಾಗೂ ದೋಷಪೂರಿತ ನೇಮಕಾತಿ ಆದೇಶವನ್ನು ಪಡೆದು, ತನ್ಮೂಲಕ ಕರ್ತವ್ಯಕ್ಕೆ ಹಾಜರು ಮಾಡಿಸಿಕೊಳ್ಳದಂತೆ ಕಛೇರಿ ಆದೇಶ ನೀಡಿದ ಕುಲಸಚಿವರ ಕ್ರಮವನ್ನು ಅನುಸಮರ್ಥಿಸಿತು.<br><br>ಮಂಡಳಿಯು ಈ ಹುದ್ದೆಗೆ ಸಾಮಾನ್ಯ (ಗ್ರಾಮೀಣ) ಮೀಸಲಾತಿ ಪ್ರವರ್ಗದಡಿ ತಪ್ಪಾಗಿ ಶ್ರೀ ಮಧುಸೂದನ್, ಎಂ.ಎಸ್. ರವರಿಗೆ ನೀಡಲಾದ ನೇಮಕಾತಿ ಆದೇಶವನ್ನು ರದ್ದುಗೊಳಿಸಲು ತೀರ್ಮಾನಿಸಿತು.<br>(ಕ್ರಮ: ಕುಲಸಚಿವರು) |
| | 17. | **ಸಹಾಯಕ ಪ್ರಾಧ್ಯಾಪಕರು (ಕ್ಷೇತ್ರ ನಿರ್ವಹಣೆ / ಕ್ಷೇತ್ರ ವ್ಯವಸ್ಥಾಪಕರು) : ಸಾ.ಅ.–1, ಪ.ಜಾ.–1**<br>ಅಧ್ಯಕ್ಷರು ಈ ಹುದ್ದೆಯ ಸಾಮಾನ್ಯ ಪ್ರವರ್ಗದಡಿ ಶ್ರೀ ಉಮೇಶ್ ರವರಿಗೆ ನೇಮಕಾತಿ ಆದೇಶ ನೀಡಿದ್ದು, ಸದರಿಯವರು ಈಗಾಗಲೇ ಸಹಾಯಕ ಪ್ರಾಧ್ಯಾಪಕರು (ಬೀಜ ವಿಜ್ಞಾನ ಹಾಗೂ ತಂತ್ರಜ್ಞಾನ) ಹುದ್ದೆಗೆ ನೇಮಕಾತಿ ಆದೇಶ ಪಡೆದಿದ್ದು, ಆ ಹುದ್ದೆಗೆ ಹಾಜರಾಗಿರುವ ಕಾರಣ, ಅವರ ನಂತರ ನಿರೀಕ್ಷಣಾ ಪಟ್ಟಿಯಲ್ಲಿರುವ ಡಾ॥ ಬಸವರಾಜ್ ಇವರಿಗೆ ನೇಮಕಾತಿ ಆದೇಶವನ್ನು ನೀಡುವ ಕುರಿತು ಮಂಡಳಿಯ ಅನುಮೋದನೆ ಕೋರಿದರು.<br><br>ಮಂಡಳಿಯು ಸಹಾಯಕ ಪ್ರಾಧ್ಯಾಪಕರು (ಕ್ಷೇತ್ರ ನಿರ್ವಹಣೆ / ಕ್ಷೇತ್ರ ವ್ಯವಸ್ಥಾಪಕರು) ಹುದ್ದೆಯ ಸಾಮಾನ್ಯ ಪ್ರವರ್ಗದಡಿ ಡಾ॥ ಬಸವರಾಜ್ ಇವರಿಗೆ ನೇಮಕಾತಿ ಆದೇಶ ನೀಡಲು ಅನುಮೋದಿಸಿತು.<br>(ಕ್ರಮ: ಕುಲಸಚಿವರು) |

| | |
|---|---|
| 18. | ಸಹಾಯಕ ಪ್ರಾಧ್ಯಾಪಕರು (ಅಗ್ರೊಮೆಟಿರೋಲಜಿ) : ಸಾ.ಅ.–1, ಪ.ಜಾ.–1<br>ಅಧ್ಯಕ್ಷರು ಈ ಹುದ್ದೆಯ ಸಾಮಾನ್ಯ ಪ್ರವರ್ಗದಡಿ ಶ್ರೀ ಆನಂದ್ ಪೋಲೀಸ್ ಪಾಟೀಲ್ ಇವರಿಗೆ ನೇಮಕಾತಿ ಆದೇಶ ನೀಡಿದ್ದು, ಸದರಿಯವರು ಈಗಾಗಲೇ ಸಹಾಯಕ ಪ್ರಾಧ್ಯಾಪಕರು (ಬೇಸಾಯಶಾಸ್ತ್ರ) ಹುದ್ದೆಗೆ ನೇಮಕಾತಿ ಆದೇಶ ಪಡೆದಿದ್ದು, ಆ ಹುದ್ದೆಗೆ ಹಾಜರಾಗಿರುವ ಕಾರಣ, ಅವರ ನಂತರ ನಿರೀಕ್ಷಣಾ ಪಟ್ಟಿಯಲ್ಲಿರುವ ಡಾ॥ ಸಿದ್ದರಾಮ ಇವರಿಗೆ ನೇಮಕಾತಿ ಆದೇಶವನ್ನು ನೀಡುವ ಕುರಿತು ಮಂಡಳಿಯ ಅನುಮೋದನೆ ಕೋರಿದರು.<br><br>ಮಂಡಳಿಯು ಸಹಾಯಕ ಪ್ರಾಧ್ಯಾಪಕರು (ಅಗ್ರೊಮೆಟಿರೋಲಜಿ) ಹುದ್ದೆಯ ಸಾಮಾನ್ಯ ಪ್ರವರ್ಗದಡಿ ಡಾ॥ ಸಿದ್ದರಾಮ ಇವರಿಗೆ ನೇಮಕಾತಿ ಆದೇಶ ನೀಡಲು ಅನುಮೋದಿಸಿತು.<br>(ಕ್ರಮ: ಕುಲಸಚಿವರು) |
| 19. | ಸಹಾಯಕ ಪ್ರಾಧ್ಯಾಪಕರು (ಕೃಷಿ ಮಾರುಕಟ್ಟೆ) : ಸಾ.ಅ.–1, ಪ.ಜಾ.–1<br>ಅಧ್ಯಕ್ಷರು ಈ ಹುದ್ದೆಯ ಸಾಮಾನ್ಯ ಪ್ರವರ್ಗದಡಿ ಶ್ರೀ ಸತೀಶ್ ಕುಮಾರ್, ಎಂ, ಇವರಿಗೆ ನೇಮಕಾತಿ ಆದೇಶ ನೀಡಿದ್ದು, ಸದರಿಯವರು ಈಗಾಗಲೇ ಸಹಾಯಕ ಪ್ರಾಧ್ಯಾಪಕರು (ಕೃಷಿ ಅರ್ಥಶಾಸ್ತ್ರ) ಹುದ್ದೆಗೆ ನೇಮಕಾತಿ ಆದೇಶ ಪಡೆದಿದ್ದು, ಆ ಹುದ್ದೆಗೆ ಹಾಜರಾಗಿರುವುದಾಗಿಯೂ, ಅವರ ನಂತರ ನಿರೀಕ್ಷಣಾ ಪಟ್ಟಿಯಲ್ಲಿರುವ ಅಭ್ಯರ್ಥಿಯಾದ ಶ್ರೀ ವಿಜಯಚಂದ್ರರೆಡ್ಡಿ ಎಸ್., ಇವರು ಸಹಾಯಕ ಪ್ರಾಧ್ಯಾಪಕರು (ಕೃಷಿ ಅರ್ಥಶಾಸ್ತ್ರ) ಹುದ್ದೆಗೆ ನೇಮಕಾತಿ ಆದೇಶ ಪಡೆದು, ಕರ್ತವ್ಯಕ್ಕೆ ಹಾಜರಾಗಿರುವ ಕಾರಣ, ಅವರ ನಂತರ ನಿರೀಕ್ಷಣಾ ಪಟ್ಟಿಯಲ್ಲಿರುವ ಶ್ರೀ ರಾಜ್‌ಕುಮಾರ್ ಭೀಮರಾವ್ ಜೀರೋಳಿ ಇವರಿಗೆ ನೇಮಕಾತಿ ಆದೇಶ ನೀಡುವ ಕುರಿತು ಮಂಡಳಿಯ ಅನುಮೋದನೆ ಕೋರಿದರು.<br><br>ಮಂಡಳಿಯು ಸಹಾಯಕ ಪ್ರಾಧ್ಯಾಪಕರು (ಕೃಷಿ ಮಾರುಕಟ್ಟೆ) ಹುದ್ದೆಯ ಸಾಮಾನ್ಯ ಪ್ರವರ್ಗದಡಿ ಶ್ರೀ ರಾಜ್‌ಕುಮಾರ್ ಭೀಮರಾವ್ ಜೀರೋಳಿ ಇವರಿಗೆ ನೇಮಕಾತಿ ಆದೇಶ ನೀಡಲು ಅನುಮೋದಿಸಿತು.<br>(ಕ್ರಮ: ಕುಲಸಚಿವರು)<br>ಅಧ್ಯಕ್ಷರು, ಸದರಿ ಹುದ್ದೆಗೆ ಪರಿಶಿಷ್ಟ ಜಾತಿ ಪ್ರವರ್ಗದಡಿ ಲಭ್ಯವಿರುವ ಏಕೈಕ ಅಭ್ಯರ್ಥಿ, ಶ್ರೀ ವಿಜಯಚಂದ್ರರೆಡ್ಡಿ, ಎಸ್. ಇವರು ಈಗಾಗಲೇ ಸಹಾಯಕ ಪ್ರಾಧ್ಯಾಪಕರು (ಕೃಷಿ ಅರ್ಥಶಾಸ್ತ್ರ) ಹುದ್ದೆಗೆ ನೇಮಕಾತಿ ಆದೇಶ ಪಡೆದು, ಕರ್ತವ್ಯಕ್ಕೆ ಹಾಜರಾಗಿರುವ ಕಾರಣ, ಸಹಾಯಕ ಪ್ರಾಧ್ಯಾಪಕರು (ಕೃಷಿ ಮಾರುಕಟ್ಟೆ) ಹುದ್ದೆಯ ಪರಿಶಿಷ್ಟ ಜಾತಿ ಪ್ರವರ್ಗವು ಖಾಲಿ ಉಳಿಯುವ ಕಾರಣ, ಸದರಿ ಹುದ್ದೆಯನ್ನು ತುಂಬುವ ಕುರಿತು ಪುನರ್ ಅಧಿಸೂಚನೆಯನ್ನು ಹೊರಡಿಸುವ ಬಗ್ಗೆ ಮಂಡಳಿಯ ಅನುಮೋದನೆ ಕೋರಿದರು.<br>ಮಂಡಳಿಯು ಸಹಾಯಕ ಪ್ರಾಧ್ಯಾಪಕ (ಕೃಷಿ ಮಾರುಕಟ್ಟೆ) ಹುದ್ದೆಯನ್ನು ರೋಸ್ಟರ್ ಹಾಗೂ ಮೀಸಲಾತಿ ನಿಯಮಗಳನುಸಾರವಾಗಿ ಪುನರ್ ಅಧಿಸೂಚಿಸಲು ಠರಾಯಿಸಿತು.<br>(ಕ್ರಮ: ಕುಲಸಚಿವರು) |

ಅಧ್ಯಕ್ಷರು ಸಮಾಜ ಕಲ್ಯಾಣ ಇಲಾಖೆಯ 9–10–2017ರಂದು ಒದಗಿಸಿದ ಸ್ಪಷ್ಟನೆಯ ಹಿನ್ನೆಲೆಯಲ್ಲಿ ಡಾ॥ ಮಲ್ಲಿಕಾರ್ಜುನ ದಾಂಡು ಇವರಿಗೆ ಸಹಾಯಕ ಪ್ರಾಧ್ಯಾಪಕರು (ಮಣ್ಣು ಮತ್ತು ನೀರು ತಾಂತ್ರಿಕತೆ) ಹುದ್ದೆಯ ಪರಿಶಿಷ್ಟ ಜಾತಿ ಬ್ಯಾಕ್‌ಲಾಗ್‌ಯಡಿ ನೇಮಕಾತಿ ಆದೇಶವನ್ನು ನೀಡಿದ್ದು, ಈ ಕ್ರಮಕ್ಕೆ ಮಂಡಳಿಯ ಅನುಸಮರ್ಥನೆ ಕೋರಿದರು.

ಮಂಡಳಿಯು ಸಮಾಜ ಕಲ್ಯಾಣ ಇಲಾಖೆಯ ಸ್ಪಷ ಣೆಯ ಹಿನ್ನೆಲೆಯಲ್ಲಿ ಡಾ॥ ಮಲ್ಲಿಕಾರ್ಜುನ ದಾಂಡು ಇವರಿಗೆ ಸಹಾಯಕ ಪ್ರಾಧ್ಯಾಪಕರು (ಮಣ್ಣು ಮತ್ತು ನೀರು ತಾಂತ್ರಿಕತೆ) ಹುದ್ದೆಯ ಪರಿಶಿಷ್ಟ ಜಾತಿ ಬ್ಯಾಕ್‌ಲಾಗ್‌ಯಡಿ ನೇಮಕಾತಿ ಆದೇಶವನ್ನು ನೀಡಿದ ಕ್ರಮವನ್ನು ಅನುಸಮರ್ಥಿಸಿತು.

(ಕ್ರಮ: ಕುಲಸಚಿವರು)

**ಸಹಾಯಕ ಪ್ರಾಧ್ಯಾಪಕರು (ಕೃಷಿ ವಿಸ್ತರಣಾ ಶಿಕ್ಷಣ) : ಸಾಮಾನ್ಯ – 2 (ಮ–1/ಗ್ರಾ–1), ಪ.ಪಂ.–1, ಪ್ರವರ್ಗ1–1**

ಅಧ್ಯಕ್ಷರು ಶ್ರೀಮತಿ ಮಲ್ಲಿಕಾ ಮೇಟಿಯವರನ್ನು ಸಾಮಾನ್ಯ (ಮಹಿಳಾ) ಪ್ರವರ್ಗದಡಿ ಸಹಾಯಕ ಪ್ರಾಧ್ಯಾಪಕರು (ಕೃಷಿ ವಿಸ್ತರಣಾ ಶಿಕ್ಷಣ) ಹುದ್ದೆಗೆ ನೇಮಕ ಮಾಡಿಕೊಳ್ಳುವ ಶಿಫಾರಸ್ಸನ್ನು ಮಂಡಳಿಯ ಅನುಮೋದನೆಗೆ ಮಂಡಿಸಿದರು.

ಮಂಡಳಿಯು ಶ್ರೀಮತಿ ಮಲ್ಲಿಕಾ ಮೇಟಿಯವರನ್ನು ಸಾಮಾನ್ಯ (ಮಹಿಳಾ) ಪ್ರವರ್ಗದಡಿ ಸದರಿ ಹುದ್ದೆಗೆ ನೇಮಕ ಮಾಡಿಕೊಳ್ಳಲು ಅನುಮೋದಿಸುತ್ತಾ, ಒಂದು ವೇಳೆ, ಶ್ರೀಮತಿ ಮಲ್ಲಿಕಾ ಮೇಟಿಯವರು ನಿಗದಿತ ಗಡುವಿನೊಳಗಾಗಿ ಕರ್ತವ್ಯಕ್ಕೆ ಹಾಜರಾಗದ ಸಂದರ್ಭದಲ್ಲಿ, ಅವರ ನಂತರ ನಿರೀಕ್ಷಣಾ ಪಟ್ಟಿಯಲ್ಲಿರುವ ಶ್ರೀಮತಿ ಚೈತ್ರಾ, ಬಿ.ಎಂ., ಇವರಿಗೆ ಕುಲಸಚಿವರು ನೇಮಕಾತಿ ಆದೇಶ ನೀಡುವಂತೆಯೂ ಅನುಮೋದಿಸಿತು.

(ಕ್ರಮ: ಕುಲಸಚಿವರು)

ಅಧ್ಯಕ್ಷರು ಸದರಿ ಹುದ್ದೆಯ ಸಾಮಾನ್ಯ (ಗ್ರಾಮೀಣ) ಮೀಸಲಾತಿಯಡಿ ಶ್ರೀ ನಾಗೇಶ್ ಇವರನ್ನು ನೇಮಕ ಮಾಡಿಕೊಳ್ಳುವ ಕುರಿತು ಮಂಡಳಿಯ ಅನುಮೋದನೆ ಕೋರಿದರು.

ಮಂಡಳಿಯು ಸಹಾಯಕ ಪ್ರಾಧ್ಯಾಪಕರು (ಕೃಷಿ ವಿಸ್ತರಣಾ ಶಿಕ್ಷಣ) ಹುದ್ದೆಯ ಸಾಮಾನ್ಯ (ಗ್ರಾಮೀಣ) ಮೀಸಲಾತಿಯಡಿ ಶ್ರೀ ನಾಗೇಶ ಇವರನ್ನು ನೇಮಕ ಮಾಡಿಕೊಳ್ಳಲು ಠರಾಯಿಸುತ್ತಾ, ಒಂದು ವೇಳೆ ನಿಗದಿತ ಅವಧಿಯೊಳಗಾಗಿ ಶ್ರೀ ನಾಗೇಶ್ ಇವರು ಕರ್ತವ್ಯಕ್ಕೆ ಹಾಜರಾಗದ ಪಕ್ಷದಲ್ಲಿ, ಕುಲಸಚಿವರು ಶ್ರೀ ನಾಗೇಶ್ ರವರ ನಂತರ ನಿರೀಕ್ಷಣಾ ಪಟ್ಟಿಯಲ್ಲಿರುವ ಶ್ರೀ ರಾಜಶೇಖರ, ಶ್ರೀ ರಾಜಶೇಖರರವರು ನಿಗದಿತ ಅವಧಿಯೊಳಗಾಗಿ ಕರ್ತವ್ಯಕ್ಕೆ ಹಾಜರಾಗದ ಸಂದರ್ಭದಲ್ಲಿ, ಅವರ ನಂತರ ನಿರೀಕ್ಷಣಾ ಪಟ್ಟಿಯಲ್ಲಿರುವ ಶ್ರೀ ಜಾದವ್ ಬಾಲಾಜಿ ಅಮೃತ್‌ರಾವ್ ಇವರಿಗೆ ನೇಮಕಾತಿ ಆದೇಶ ನೀಡುವಂತೆಯೂ ಠರಾಯಿಸಿತು.

(ಕ್ರಮ: ಕುಲಸಚಿವರು)

ಅಧ್ಯಕ್ಷರು ಸಹಾಯಕ ಪ್ರಾಧ್ಯಾಪಕರು (ಕೃಷಿ ವಿಸ್ತರಣಾ ಶಿಕ್ಷಣ) ಹುದ್ದೆಯ ಪರಿಶಿಷ್ಟ ಪಂಗಡ, ಪ್ರವರ್ಗ1 ಅಡಿ ಯಾವುದೇ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದಿರುವುದಾಗಿ ಸಭೆಯ ಗಮನಕ್ಕೆ ತಂದಾಗ, ಮಂಡಳಿಯು ಸದರಿ ಹುದ್ದೆಗಳನ್ನು ಕೂಡಲೇ ಪುನರ್ ಅಧಿಸೂಚಿಸಲು ಠರಾಯಿಸಿತು.

(ಕ್ರಮ: ಕುಲಸಚಿವರು)

ಮಂಡಳಿಯು ಈ ಸಭೆಯ ನಡುವಳಿಗಳು ಸ್ಥಿರೀಕರಣಗೊಳ್ಳುವವರೆಗೂ ಕಾಯದೇ, ಕೂಡಲೇ ತಾನು ಅನುಮೋದಿಸಿದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶಗಳನ್ನು ನೀಡಲು ಕುಲಸಚಿವರಿಗೆ ನಿರ್ದೇಶಿಸಿತು.

(ಕ್ರಮ: ಕುಲಸಚಿವರು)

ಅಧ್ಯಕ್ಷರು ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು ಮತ್ತು ತತ್ಸಮಾನ ಹುದ್ದೆಗಳಿಗೆ ನೇರ ನೇಮಕಾತಿ (ಇಂಟರ್–ಸೇ ಮೆರಿಟ್ ಆಧರಿತ) ಮುಖಾಂತರ ಭರ್ತಿಮಾಡುವ ಸಂಬಂಧ ಆಯ್ಕೆ ಸಮಿತಿಯ ಶಿಫಾರಸ್ಸುಗಳನ್ನು ಮಂಡಳಿಯ ಅನುಮೋದನೆಗೆ ಸಲ್ಲಿಸುವ ಬಗ್ಗೆ ಪ್ರಸ್ತಾಪಿಸಿದಾಗ, ಮಂಡಳಿಯು ಈ ಪ್ರಸ್ತಾವನೆಯನ್ನು ಮುಂದೂಡುತ್ತಾ, ಸದರಿ ಪ್ರಸ್ತಾವನೆಯನ್ನು ಪ್ರತ್ಯೇಕ ಕಾರ್ಯಸೂಚಿ ವಿಷಯವನ್ನಾಗಿ ಪರಿಗಣಿಸಿ, ವಿಶೇಷ ಸಭೆಯನ್ನು ಈ ಕುರಿತು ಕೂಡಲೇ ಏರ್ಪಡಿಸಿ, ಸದರಿ ಸಭೆಯಲ್ಲಿ ನಿರ್ಧರಿಸಲು ತೀರ್ಮಾನಿಸಿತು.

(ಕ್ರಮ: ಕುಲಸಚಿವರು)

**ದೇವದುರ್ಗ ಹಾಗೂ ನಾಲವಾರ (ಚಿತ್ತಾಪೂರ ತಾಲ್ಲೂಕು) ಗಳಲ್ಲಿ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ.**

ಸರಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ ಇವರು ದೇವದುರ್ಗ ಹಾಗೂ ನಾಲವಾರ (ಚಿತ್ತಾಪೂರ ತಾಲ್ಲೂಕು) ಗಳಲ್ಲಿ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರಗಳನ್ನು ಸ್ಥಾಪಿಸಲು ಅಗತ್ಯವಿರುವ ಜಮೀನು ಮತ್ತು ಸದರಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ತಗಲಬಹುದಾದ ವೆಚ್ಚದ ವಿವರಗಳನ್ನು ತಿಳಿಯಲಿಚ್ಛಿಸಿದರು.

(ಕ್ರಮ: ವಿಸ್ತರಣಾ ನಿರ್ದೇಶಕರು)

| | |
|---|---|
| ಐಟಂ–3 | ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಅಧಿಕಾರಿಗಳ ನೇಮಕಾತಿಯ ಆಯ್ಕೆ ಪಟ್ಟಿಯನ್ನು ಅನುಮೋದಿಸುವ ಕುರಿತು.<br><br>ಠರಾವು: ಅಧ್ಯಕ್ಷರು ರಾಯಚೂರು ಕೃಷಿ ವಿಶ್ವವಿದ್ಯಾಲಯದ ಖಾಲಿ ಇರುವ ಅಧಿಕಾರಿ ಹುದ್ದೆಗಳ ನೇಮಕಾತಿ ಸಂಬಂಧ ಆಯ್ಕೆ ಸಮಿತಿಯ ಶಿಫಾರಸ್ಸುಗಳನ್ನು ಮಂಡಳಿಯ ಮುಂದೆ ಪ್ರಸ್ತಾಪಿಸಿದಾಗ, ಮಂಡಳಿಯು ಸದರಿ ಶಿಫಾರಸ್ಸುಗಳನ್ನು ಸದ್ಯದಲ್ಲೇ ನಿಗದಿಪಡಿಸುವ ನೇಮಕಾತಿ ಕುರಿತ ವ್ಯವಸ್ಥಾಪನಾ ಮಂಡಳಿಯ ವಿಶೇಷ ಸಭೆಯಲ್ಲಿ ಪರಿಗಣಿಸಲು ತೀರ್ಮಾನಿಸಿತು.<br><br>(ಕ್ರಮ: ಕುಲಸಚಿವರು) |
| ಐಟಂ–4 | ದಿನಾಂಕ 13-11-2017 ರಂದು ಮಧ್ಯಾಹ್ನ 2.30 ಗಂಟೆಗೆ ನಡೆದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಹಣಕಾಸು ಸಮಿತಿಯ 11ನೇ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳಿಗೆ ಅನುಮೋದನೆ ನೀಡುವ ಕುರಿತು<br><br>ಠರಾವು: ಮಂಡಳಿಯು 2014-15ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯ ಆಡಿಟ್ ಪ್ಯಾರಾಗಳ ಮೇಲಿನ ಅನುಪಾಲನಾ ವಿವರಗಳನ್ನು ಪರಾಂಬರಿಸಿ, ಸದರಿ ವಿವರಣೆಗಳು ಇನ್ನೂ ಹೆಚ್ಚಾಗಿ ವಿಸ್ತೃತ ಹಾಗೂ ಸ್ಪಷ್ಟನೆಯಿಂದ ಕೂಡಿರಬೇಕೆಂದು ಅಭಿಪ್ರಾಯಿಸಿ, ವಿಷಯವನ್ನು ಮುಂದೂಡಲು ತೀರ್ಮಾನಿಸಿತು.<br><br>(ಕ್ರಮ : ಹಣಕಾಸು ನಿಯಂತ್ರಣಾಧಿಕಾರಿಗಳು) |
| ಐಟಂ–5 | ರೂ 10.00 ಲಕ್ಷ ಮೌಲ್ಯವನ್ನು ಮೀರಿದ ಪ್ರಯೋಗಾಲಯದ ಪ್ರತಿ ಉಪಕರಣದ ಖರೀದಿಗೆ ಅನುಮೋದನೆ ನೀಡುವ ಕುರಿತು.<br><br>ಠರಾವು:<br>ಚರ್ಚೆಯ ನಂತರ, ಮಂಡಳಿಯು ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಈ ಕೆಳಕಂಡ ಪ್ರಯೋಗಾಲಯ ಉಪಕರಣಗಳನ್ನು ಖರೀದಿಸಲು ಅನುಮೋದನೆ ನೀಡಿತಲ್ಲದೇ, ಇನ್ನು ಮುಂದೆ ಉಪಕರಣಗಳನ್ನು ಖರೀದಿಸುವಾಗ ಆ ಉಪಕರಣಗಳನ್ನು ಬಳಸಲು ನುರಿತ ತಾಂತ್ರಿಕ ಸಿಬ್ಬಂದಿ ಲಭ್ಯವಿರುವರೇ ಎಂಬ ಬಗ್ಗೆ ಹೆಚ್ಚಿನ ವಿವರಗಳನ್ನು ಹಾಗೂ ಸಮರ್ಥನೆಗಳನ್ನು ಸಲ್ಲಿಸುವಂತೆ ಸೂಚಿಸಿತು: |

| Sl.No. | Name of the item | Qty. | Amount (Rs.) |
|---|---|---|---|
| 1 | HPLC 1200 Series (upgradation of High Performance Liquid Chromotography 1200 series equipment of Agilent make alongwith hardware accessories and related software) | 1 | 14,16,000.00 |
| 2 | The Ride on Type Rice Transplanter | 1 | 13,82,900.00 |
| 3 | Designing & Development of Animation Films | 10 | 25,00,000.00 |
| | **Total** | | **53,98,900.00** |

(ಕ್ರಮ : ಹಣಕಾಸು ನಿಯಂತ್ರಣಾಧಿಕಾರಿಗಳು/ ಸರಕು ಖರೀದಿ ಅಧಿಕಾರಿ)

| | |
|---|---|
| ಐಟಂ–6 | ಆವರ್ತನಿಧಿ ಅನುದಾನದಲ್ಲಿ ಹಾಗೂ ಕೃವಿವಿಯ ಆಂತರಿಕ ಆದಾಯ ಮೂಲದಿಂದ ವಾಹನಗಳ ಖರೀದಿಗೆ ಅನುಮೋದನೆ ನೀಡುವ ಕುರಿತು.<br><br>ಠರಾವು: ವಿಸ್ತೃತ ಚರ್ಚೆಯ ನಂತರ, ಮಂಡಳಿಯು ಈ ಕೆಳಗಿನಂತೆ ಕೃಷಿ ವಿಶ್ವವಿದ್ಯಾಲಯದ ಆವರ್ತನಿಧಿ ಅನುದಾನದಲ್ಲಿ ಹಾಗೂ ಕೃವಿವಿಯ ಆಂತರಿಕ ಆದಾಯ ಮೂಲಗಳಿಂದ ಯುಕ್ತ ಪ್ರಕ್ರಿಯೆಯನ್ನು ಅನುಸರಿಸಿ, ವಾಹನಗಳನ್ನು ಖರೀದಿಸಲು ಅನುಮತಿಸಿತು. |

ಅ. ಆವರ್ತನಿಧಿಯಡಿ ಖರೀದಿಸುವ ವಾಹನಗಳ ವಿವರ :

| ಕ್ರ.ಸಂ. | ವಾಹನ ವಿವರ | ಸಂಖ್ಯೆ | ಇಲಾಖಾ ಹೆಸರು | ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|---|---|
| 1 | ಬೋಲೆರೋ ಪಿಕ್-ಅಪ್ | 1 | ಬೀಜ ಘಟಕ, ಕಲಬುರಗಿ | 11.00 |
| 2. | ಬೋಲೆರೋ | 1 | ಎಐಸಿಆರ್‌ಪಿ (ಕಡಲೆ), ಕಲಬುರಗಿ | 10.79 |
| 3. | ಬೋಲೆರೋ | 1 | ಬಯೋ ಏಜೆಂಟ್ ಆವರ್ತನಿಧಿ, ಕಲಬುರಗಿ | 11.00 |
| 4. | ಸ್ಕಾರಪಿಯೋ | 1 | ವಿಸ್ತರಣಾ ನಿರ್ದೇಶನಾಲಯ | 16.00 |
| 5. | ಬೋಲೆರೋ | 1 | ಬೀಜ ಘಟಕ, ಭೀಮರಾಯನಗುಡಿ | 11.00 |

ಬ. ಕೃವಿವಿ., ಆಂತರಿಕ ಆದಾಯ ಮೂಲಗಳಿಂದ ಖರೀದಿಸುವ ವಾಹನಗಳ ವಿವರ :

| ಕ್ರ.ಸಂ. | ವಾಹನ ವಿವರ | ಸಂಖ್ಯೆ | ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|---|
| 1 | ಇನ್ನೋವಾ ಕ್ರಿಸ್ಟಾ | 1 | 23,07,534.00 |
| 2 | ಹೋಂಡಾ ಸಿಟಿ (ಝಡ್‌ಎಕ್ಸ್ (ಐ-ಡಿಟಿಇಸಿ) | 2 | 34,43,514.00 |
| 3 | ಸ್ವಿಫ್ಟ್ ಡಿಜೈರ್ (ಝಡ್‌ಡಿಐ+) | 1 | 10,93,111.00 |

(ಕ್ರಮ : ಹಣಕಾಸು ನಿಯಂತ್ರಣಾಧಿಕಾರಿಗಳು/ ಸರಕು ಖರೀದಿ ಅಧಿಕಾರಿ)

**ಐಟಂ-7** **ಕೃವಿವಿ., ರಾಯಚೂರಿನಲ್ಲಿ 2017-18 ನೇ ಸಾಲಿನಲ್ಲಿ ರೈತರ ಸಹಭಾಗಿತ್ವದ ಕಾರ್ಯಕ್ರಮದಡಿ ವಿವಿಧ ಬೀಜೋತ್ಪಾದನಾ ಯೋಜನೆಗಳ ಅನುಷ್ಠಾನಕ್ಕೆ ಅವಶ್ಯವಿರುವ ಅನುದಾನಕ್ಕೆ ಅನುಮೋದನೆ ನೀಡುವ ಕುರಿತು.**

**ಠರಾವು:** ಮಂಡಳಿಯು ಕರ್ನಾಟಕ ಸರ್ಕಾರದ ವತಿಯಿಂದ ಬೀಜ ನಷ್ಟ ನಿಧಿಗಾಗಿ ರೂ. 25 ಲಕ್ಷ ಒದಗಿಸಿರುವುದನ್ನು ಗಮನಿಸಿ, 2017-18ನೇ ಸಾಲಿನಲ್ಲಿ ರಾಯಚೂರು ಕೃಷಿ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ರೈತರ ಸಹಭಾಗಿತ್ವ ಕಾರ್ಯಕ್ರಮದಡಿ ವಿವಿಧ ಬೀಜೋತ್ಪಾದನಾ ಯೋಜನೆಗಳನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ರೂ. 453.22 ಲಕ್ಷಗಳ ಆಯವ್ಯಯವನ್ನು ಅನುಮೋದಿಸಿತು.

(ಕ್ರಮ : ವಿಶೇಷಾಧಿಕಾರಿ (ಬೀಜ))

**ಐಟಂ-8** **ಐ.ಸಿ.ಎ.ಆರ್-ಅಟಾರಿ ಹಾಗೂ ಕೃವಿವಿ.,ಗಳು ಕೃಷಿ ವಿಜ್ಞಾನ ಕೇಂದ್ರಗಳಲ್ಲಿಯ ವಿಜ್ಞಾನಿಗಳಿಗೆ ನೀಡುವ ವೇತನದಲ್ಲಿಯ ತಾರತಮ್ಯದಿಂದ ಉದ್ಭವಿಸಿದ ಕೊರತೆಯನ್ನು ತನ್ನ ಅನುದಾನದಿಂದ ಭರಿಸಿರುವ ವಿಶ್ವವಿದ್ಯಾಲಯದ ಕ್ರಮವನ್ನು ಅನುಸಮರ್ಥಿಸುವ ಕುರಿತು**

**ಠರಾವು:** ಮಂಡಳಿಯು ಬೆಂಗಳೂರು ಮತ್ತು ಧಾರವಾಡ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಈಗಾಗಲೇ ತೆಗೆದುಕೊಳ್ಳಲಾದ ಕ್ರಮದಂತೆ, ಐ.ಸಿ.ಎ.ಆರ್-ಅಟಾರಿ ಹಾಗೂ ಕೃವಿವಿ.,ಗಳು ಕೃಷಿ ವಿಜ್ಞಾನ ಕೇಂದ್ರಗಳಲ್ಲಿಯ ವಿಜ್ಞಾನಿಗಳಿಗೆ ನೀಡುವ ವೇತನಗಳಲ್ಲಿಯ ತೀವ್ರ ತಾರತಮ್ಯದಿಂದ ಉದ್ಭವಿಸಿದ ಕೊರತೆ ರೂ. 3,51,70,075/- ಗಳ ಮೊತ್ತವನ್ನು ತನ್ನ ಅನುದಾನದಿಂದ ಭರಿಸಿರುವ ವಿಶ್ವವಿದ್ಯಾಲಯದ ಕ್ರಮವನ್ನು ಅನುಸಮರ್ಥಿಸಿತು.

(ಕ್ರಮ : ವಿಸ್ತರಣಾ ನಿರ್ದೇಶಕರು / ಹಣಕಾಸು ನಿಯಂತ್ರಣಾಧಿಕಾರಿಗಳು)

**ಐಟಂ–9** ಕೃವಿವಿ., ಸಿಬ್ಬಂದಿಯವರ ರೂ. 25,000/– ಕ್ಕಿಂತ ಹೆಚ್ಚಿನ ಮೊತ್ತದ ವೈದ್ಯಕೀಯ ವೆಚ್ಚದ ಬಿಲ್ಲುಗಳ ಮರುಪಾವತಿಗೆ ಅನುಮೋದನೆ ನೀಡುವ ಕುರಿತು.

ಠರಾವು:

ರಾಯಚೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು ಪರಿಶೀಲಿಸಿ, ಮೇಲುರುಜು ಮಾಡಿದ ಈ ಕೆಳಕಂಡ ಸಿಬ್ಬಂದಿಯವರ ವೈದ್ಯಕೀಯ ವೆಚ್ಚದ ಮರುಪಾವತಿಗೆ ಮಂಡಳಿಯು ಅನುಮೋದನೆ ನೀಡಿತು :

| ಕ್ರ. ಸಂ. | ಸಿಬ್ಬಂದಿಯವರ ವಿವರ | ವೈದ್ಯಕೀಯ ವೆಚ್ಚ ಮರು – ಪಾವತಿಸಬೇಕಾದ ಮೊತ್ತ (ರೂ.) |
|---|---|---|
| 1 | ಡಾ. ಗೋವಿಂದಪ್ಪ ಎಮ್.ಆರ್, ವಿಷಯ ತಜ್ಞರು, (ಸಸ್ಯರೋಗ್ಯಶಾಸ್ತ್ರ) | 32,960/– |
| 2 | ಡಾ. ರಾಜೇಶ ಎನ್.ಎಲ್. ಸಹಾಯಕ ಪ್ರಾಧ್ಯಾಪಕರು | 2,39,210/– |

ಚರ್ಚೆಯ ನಂತರ, ಸರಕಾರದಿಂದ ಮತ್ತು ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದ ಆಸ್ಪತ್ರೆಗಳನ್ನು ಹೊರತುಪಡಿಸಿ ಇತರೇ ಆಸ್ಪತ್ರೆಗಳಲ್ಲಿ ತುರ್ತು ಸಂದರ್ಭಗಳಲ್ಲಿ ಚಿಕಿತ್ಸೆ ಪಡೆದ ಈ ಕೆಳಕಂಡ ಸಿಬ್ಬಂದಿಯವರ ವೈದ್ಯಕೀಯ ವೆಚ್ಚದ ಬಿಲ್ಲುಗಳ ಮರುಪಾವತಿಗೆ ಮಂಡಳಿಯು ಅನುಮೋದನೆ ನೀಡಿತು:

| ಕ್ರ. ಸಂ. | ಸಿಬ್ಬಂದಿಯವರ ವಿವರ | ವೈದ್ಯಕೀಯ ವೆಚ್ಚ ಮರು – ಪಾವತಿಸಬೇಕಾದ ಮೊತ್ತ (ರೂ.) |
|---|---|---|
| 1 | ಶ್ರೀ. ಎಮ್. ಎನ್. ಬಿರಾದಾರ, ಹಣಕಾಸು ನಿಯಂತ್ರಣಾಧಿಕಾರಿಗಳು, | 19,125/– |
| 2 | ಶ್ರೀ. ನಾಗಬಸವ, ಅಧೀಕ್ಷಕರು(ಲೆಕ್ಕ), ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ ಕೃವಿವಿ., | 26,871/– |
| 3 | ಶ್ರೀ. ಹೆಚ್. ಸೋಮನ ಗೌಡ, ಹಿರಿಯ ಪ್ರಯೋಗ ಶಾಲಾ ಸಹಾಯಕರು, | 30,258/– |

(ಕ್ರಮ: ಕುಲಸಚಿವರು / ಹಣಕಾಸು ನಿಯಂತ್ರಣಾಧಿಕಾರಿಗಳು))

ವ್ಯವಸ್ಥಾಪನಾ ಮಂಡಳಿಯ ನಾಮನಿರ್ದೇಶಿತ ಸದಸ್ಯರು ತಮಗೂ ವೈದ್ಯಕೀಯ ವೆಚ್ಚದ ಮರುಪಾವತಿ ಕುರಿತಂತೆ ವಿಶ್ವವಿದ್ಯಾಲಯದ ವತಿಯಿಂದ ಸೂಕ್ತ ಪ್ರಸ್ತಾವನೆಯನ್ನು ಸರಕಾರಕ್ಕೆ ಸಲ್ಲಿಸಬೇಕೆಂದು ಅಭಿಪ್ರಾಯಿಸಿದರು.

(ಕ್ರಮ: ಕುಲಸಚಿವರು)

**ಐಟಂ–10** ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವ್ಯಾಪ್ತಿಯಲ್ಲಿ ಕಾರ್ಯನಿರತ /ಕಾರ್ಯನಿರ್ವಹಿಸಿದ 194 ಮಾಸಿಕ ವೇತನ ನೌಕರರ (ಎಂ.ಆರ್.ಇ.) ಸೇವಾ ಸಕ್ರಮಾತಿ ಕುರಿತು

ಡಾ॥ ಎಂ.ಬಿ. ಚೆಟ್ಟಿ, ಎ.ಡಿ.ಜಿ.(ಹೆಚ್.ಆರ್.ಡಿ), ಐ.ಸಿ.ಎ.ಆರ್. ನವದೆಹಲಿ ಇವರು ಎಂ.ಆರ್.ಇ. ಗಳ ಸೇವಾ ಸಕ್ರಮಾತಿಯು ತುಂಬಾ ಕಾನೂನು ಗೊಂದಲಗಳಿಂದ ಕೂಡಿದ್ದು, ಈ ಸಂಕೀರ್ಣ ವಿಷಯವನ್ನು ಗಂಭೀರವಾಗಿ ಪರಿಗಣಿಸುವ ಅವಶ್ಯಕತೆಯನ್ನು ಮಂಡಳಿಯ ಮುಂದೆ ವಿವರಿಸಿದರು.

ಅಧ್ಯಕ್ಷರು 194 ಎಂ.ಆರ್.ಇ.ಗಳ ಸೇವಾ ಸಕ್ರಮಾತಿಯ ಪ್ರಸ್ತಾವನೆಯು ಮಂಡಳಿಯ ಮುಂದೆ ವಿಸ್ತೃತ ಚರ್ಚೆಯಾಗಿ, ತದನಂತರ ಸರಕಾರಕ್ಕೆ ಸೂಕ್ತ ಕ್ರಮಕೈಗೊಳ್ಳಲು ಕ್ರಮವಿಡಲಾಗುತ್ತಿದೆ ಎಂದು ಅಭಿಪ್ರಾಯಿಸಿದರು.

ಠರಾವು: ಮಂಡಳಿಯು 1–7–1984 ರಿಂದ 194 ಎಂ.ಆರ್.ಇ.ಗಳು ಕಾರ್ಯನಿರತ / ಕಾರ್ಯ ನಿವೃತ್ತ ಹೊಂದಿದ್ದು, ಅವರ ಸೇವೆಯನ್ನು ಸಕ್ರಮಗೊಳಿಸುವ ಕುರಿತು ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಠರಾಯಿಸಿತು.

(ಕ್ರಮ: ಕುಲಸಚಿವರು)

| | |
|---|---|
| ಐಟಂ–11 | ಕರ್ನಾಟಕ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ನಿಯಮಾವಳಿಗನುಸಾರ, ಸಹಾಯಕ ಪ್ರಾಧ್ಯಾಪಕ ಹಾಗೂ ಸೇವಾ ಸಿಬ್ಬಂದಿ ವೃಂದದ ಹುದ್ದೆಗಳ ಪ್ರವೇಶ ಮಟ್ಟದ ನೇಮಕಾತಿಗಾಗಿ ಗರಿಷ್ಠ ವಯೋಮಿತಿಯ ಮಾನದಂಡವನ್ನು ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ಅನುಮೋದನೆ ನೀಡುವ ಕುರಿತು.<br><br>ಠರಾವು: ಕರ್ನಾಟಕ ನಾಗರೀಕ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು, 1977 ಇದರ ಪ್ರಕರಣ 6 ಮತ್ತು ದಿನಾಂಕ 6–1–2017 ರಂದು ಬರೆದ ಕೃಷಿ ಇಲಾಖೆಯ ಕಾರ್ಯದರ್ಶಿಗಳ ಪತ್ರದನ್ವಯ ಗರಿಷ್ಟ ವಯೋಮಿತಿಯನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಡಿ.ಪಿ.ಎ.ಆರ್.) ನಿಯಮಗಳಿಗನುಸಾರವಾಗಿ ರಾಯಚೂರು ಕೃಷಿ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಸಹಾಯಕ ಪ್ರಾಧ್ಯಾಪಕ ಹಾಗೂ ಸೇವಾ ಸಿಬ್ಬಂದಿ ವೃಂದದ ಹುದ್ದೆಗಳ ಪ್ರವೇಶ ಮಟ್ಟದ ನೇಮಕಾತಿಗಾಗಿ ಅಳವಡಿಸಿಕೊಳ್ಳಲು ಠರಾಯಿಸಿತು.<br>(ಕ್ರಮ: ಕುಲಸಚಿವರು) |
| ಐಟಂ–12 | ಡಾ. ಪರಸಪ್ಪ ಎಸ್. ಕಾಣನ್ನವರ್, ಸಹಾಯಕ ಪ್ರಾಧ್ಯಾಪಕರು (ಮಣ್ಣು ಮತ್ತು ನೀರು ತಂತ್ರಜ್ಞಾನ), ಕೃಷಿ ತಾಂತ್ರಿಕ ಮಹಾವಿದ್ಯಾಲಯ, ರಾಯಚೂರು ಇವರು ಸಲ್ಲಿಸಿದ ರಾಜೀನಾಮೆಯ ಅಂಗೀಕಾರವನ್ನು ಅನುಸಮರ್ಥಿಸುವ ಕುರಿತು.<br><br>ಠರಾವು: ಡಾ. ಪರಸಪ್ಪ ಎಸ್. ಕಾಣನ್ನವರ್, ಸಹಾಯಕ ಪ್ರಾಧ್ಯಾಪಕರು (ಮಣ್ಣು ಮತ್ತು ನೀರು ತಂತ್ರಜ್ಞಾನ), ಕೃಷಿ ತಾಂತ್ರಿಕ ಮಹಾವಿದ್ಯಾಲಯ, ರಾಯಚೂರು ಇವರು ಕೃಷಿ ವಿಶ್ವವಿದ್ಯಾಲಯ, ಧಾರವಾಡದಲ್ಲಿ ಸಹ ಪ್ರಾಧ್ಯಾಪಕ ಹುದ್ದೆಗೆ ನೇಮಕಗೊಂಡ ಹಿನ್ನೆಲೆಯಲ್ಲಿ ತಮ್ಮ ಸ್ಥಾನಕ್ಕೆ ರಾಜೀನಾಮೆಯನ್ನು ಸಲ್ಲಿಸಿದ್ದನ್ನು ಅಂಗೀಕರಿಸಲಾಗಿದ್ದು, ವಿಶ್ವವಿದ್ಯಾಲಯದ ಸದರಿ ಕ್ರಮವನ್ನು ಮಂಡಳಿಯು ಅನುಸಮರ್ಥಿಸಿತು.<br>(ಕ್ರಮ: ಕುಲಸಚಿವರು) |
| | ಹೆಚ್ಚುವರಿ ಕಾರ್ಯಸೂಚಿ ವಿಷಯಗಳು. |
| ಐಟಂ–1 | ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವಿವಿಧ ಆವರಣಗಳಲ್ಲಿ ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಟೆಂಡರ್ ಮಾಡಿದ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ಕುರಿತು.<br><br>ಠರಾವು: ಮಂಡಳಿಯು ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ, ಟೆಂಡರ್ ಮಾಡಿದ ಸಿವಿಲ್ ಕಾಮಗಾರಿಗಳಾದ ಗಂಗಾವತಿಯಲ್ಲಿ ಕೃಷಿ ಸಂಶೋಧನಾ ಕೇಂದ್ರ ಸಂಕೀರ್ಣದ ಕಾಮಗಾರಿ ಹಾಗೂ ವಿಶ್ವವಿದ್ಯಾಲಯದ ಆಡಳಿತ ಭವನದ ಮುಂಭಾಗದ ಮುಖ್ಯ ದ್ವಾರದ ಕಾಮಗಾರಿಗಳನ್ನು ಟೆಂಡರ್ ಮುಖಾಂತರ ಕರೆದು, ಕನಿಷ್ಟ ಬಿಡ್‌ದಾರರಿಗೆ ವಹಿಸಲು ತೀರ್ಮಾನಿಸಿತು.<br>(ಕ್ರಮ: ಕಾರ್ಯನಿರ್ವಾಹಕ ಅಭಿಯಂತರು) |
| | ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೇ ವಿಷಯಗಳು |
| | ಎ. ವ್ಯವಸ್ಥಾಪನಾ ಮಂಡಳಿಯ ನಾಮನಿರ್ದೇಶಿತ ಸದಸ್ಯರುಗಳನ್ನು ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ನಡೆಯುವ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಮಿತಿಗಳಲ್ಲಿ ಸದಸ್ಯರಾಗಿ ನಾಮನಿರ್ದೇಶಿತ ಮಾಡುವ ಬಗ್ಗೆ ಪ್ರಸ್ತಾವನೆ.<br><br>ಠರಾವು : ಮಾನ್ಯ ಸದಸ್ಯರಾದ ಶ್ರೀ ವೀರನಗೌಡ ಪರಸರೆಡ್ಡಿ, ಶ್ರೀ ಅಮರೇಶ ಬಲ್ಲಿದವ ಹಾಗೂ ಡಾ॥ ಶೇಖರಗೌಡ ಎಂ., ಇವರು ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಕ್ರಮವಾಗಿ ವಿಧಾನ ಸಭಾ ಸದಸ್ಯರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಪ್ರತಿ ಮೂರು ತಿಂಗಳಿಗೊಮ್ಮೆ ಅಭಿವೃದ್ಧಿ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಪ್ರಗತಿ ಪರಿಶೀಲಾನಾ ಸಭೆಗಳು ನಡೆಯುತ್ತಿದ್ದು, ಸದರಿ ಸಮಿತಿಗಳಲ್ಲಿ ವ್ಯವಸ್ಥಾಪನಾ ಮಂಡಳಿಯ ನಾಮನಿರ್ದೇಶಿತ ಸದಸ್ಯರುಗಳನ್ನು ಸೇರಿಸಿಕೊಳ್ಳುವ ಬಗ್ಗೆ ಪ್ರಸ್ತಾಪವನ್ನು ಮಂಡಿಸಿದಾಗ, ಕೃಷಿ ಇಲಾಖೆಯ ಕಾರ್ಯದರ್ಶಿಯವರು ಈ ಬಗ್ಗೆ ತಮಗೆ ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸಲು ಕುಲಸಚಿವರಿಗೆ ಸೂಚಿಸುತ್ತಾ, ತಾವು ತದನಂತರ ವಿಷಯದ ಕುರಿತು ಯೋಜನೆ, |

| | |
|---|---|
| | ಕಾರ್ಯಕ್ರಮ ಮೇಲ್ವಿಚಾರಣೆ ಹಾಗೂ ಸಾಂಖ್ಯಿಕ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳೊಂದಿಗೆ ಸಮಾಲೋಚಿಸುವುದಾಗಿ ತಿಳಿಸಿದರು.<br>(ಕ್ರಮ: ಕುಲಸಚಿವರು) |

ಸಭೆಯ ಅಧ್ಯಕ್ಷರಿಗೆ ಹಾಗೂ ಗೌರವಾನ್ವಿತ ಸದಸ್ಯರುಗಳಿಗೆ ಕುಲಸಚಿವರು ವಂದನೆ ಸಲ್ಲಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

| ಸಹಿ/- 6-12-2017 | ಸಹಿ/- 6-12-2017 |
|---|---|
| (ಪಿ.ಎಂ. ಸಾಲಿಮಠ)<br>ಕುಲಪತಿಗಳು ಹಾಗೂ ಅಧ್ಯಕ್ಷರು<br>ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. | (ಗುತ್ತಿ ಜಂಬುನಾಥ)<br>ಕುಲಸಚಿವರು ಹಾಗೂ ಸದಸ್ಯ-ಕಾರ್ಯದರ್ಶಿ<br>ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. |

(ಗುತ್ತಿ ಜಂಬುನಾಥ)
ಕುಲಸಚಿವರು ಹಾಗೂ ಸದಸ್ಯ-ಕಾರ್ಯದರ್ಶಿ
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.

33